**ಸಾಕ್ಷಿಗೆ ದಿನಾಂಕಃ 17.11.2025 ರಂದು ಪ್ರಮಾಣ ಮಾಡಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಶ್ರೀ. ಎಂ.ಎಸ್. ವಕೀಲರಿಂದಃ**

ನಾನು ನನ್ನ ಮಕ್ಕಳನ್ನು ಕರೆದುಕೊಂಡು ಎದುರುದಾರರಿಗೆ ತಿಳಿಸದೆ ನಮ್ಮ ತಂದೆಯ ಮನೆಗೆ ಹೋಗಿರುತ್ತೇನೆ ಎಂದರೆ ಸರಿಯಲ್ಲ. ಎದುರುದಾರರು ಎರಡು ಬಾರಿ ಪಂಚಾಯಿತಿಯನ್ನು ಮಾಡಿ ನನ್ನನ್ನು ಕರೆದುಕೊಂಡು ಹೋಗಲು ಕೇಳಿರುತ್ತಾರೆ ಎಂದರೆ ಸರಿಯಲ್ಲ. ನಂತರ ನಾನು ಎದುರುದಾರರ ಯೋಗಕ್ಷೇಮವನ್ನು ವಿಚಾರಿಸಿರುವುದಿಲ್ಲ ಎಂದರೆ ಸರಿಯಲ್ಲ. ಪಂಚಾಯಿತಿಯ ತೀರ್ಮಾನದಂತೆ ಎದುರುದಾರರನ್ನು ನಾನು ನೋಡಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಪಂಚಾಯಿತಿ ಮಾಡುವಾಗ ನನ್ನ ಸಹೋದರರು ಎದುರುದಾರರ ವಿರುದ್ಧ ಗಲಾಟೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಕುಟುಂಬದಲ್ಲಿರುವವರು ರಾಜಕೀಯ ಪ್ರಭಾವ ಉಳ್ಳವರು ಎಂದರೆ ಸರಿಯಲ್ಲ. ಎದುರುದಾರರಿಗೆ ಸಂಬಂಧಿಸಿದಂತೆ ಸ್ವತ್ತುಗಳ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ನಿ.ಪಿ.16 ರಂತೆ 16 ½ ಗುಂಟೆ ಜಮೀನಿನ ಸ್ವಾಧೀನವನ್ನು ನಾನೇ ಹೊಂದಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಸ್ವತ್ತಿನಿಂದ ಬಂದ ಆದಾಯವನ್ನು ನಾನೇ ಅನುಭವಿಸುತ್ತಿದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಎದುರುದಾರರಿಗೆ ಮಾಲಂಗಿ ಗ್ರಾಮದಲ್ಲಿ ಹಾಗೂ ಅವರು ಈಗ ವಾಸ ಮಾಡುತ್ತಿರುವ ಊರಿನಲ್ಲಿ ಯಾವುದೇ ಮನೆ ಇರುವುದಿಲ್ಲ ಎಂದರೆ ಸರಿ. ನಿ.ಪಿ.15 ರಂತೆ ಎದುರುದಾರರ ಹೆಸರಿನಲ್ಲಿ ಇರುವುದಿಲ್ಲ ಎಂದರೆ ಸರಿ. ಎದುರುದಾರರಿಗೆ ವರದಕ್ಷಿಣೆ ನೀಡಿರುವ ಬಗ್ಗೆ ಯಾವುದೇ ದಾಖಲೆ ಇರುವುದಿಲ್ಲ. ಎದುರುದಾರರಿಗೆ ವಾರ್ಷಿಕವಾಗಿ 2 ಲಕ್ಷ ಆದಾಯ ಇರುವ ಬಗ್ಗೆ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ಎದುರುದಾರರು ನನಗೆ ದೈಹಿಕ ಮತ್ತು ಮಾನಸಿಕವಾಗಿ ಹಿಂಸೆ ನೀಡುತ್ತಿದ್ದ ಬಗ್ಗೆ ದೂರನ್ನು ಸಲ್ಲಿಸಿರುವುದಿಲ್ಲ. ಎದುರುದಾರರಿಗೆ ಈಗ 60 ವರ್ಷ ಆಗಿರುತ್ತದೆ ಎಂದರೆ ಸರಿ. ಅವರ ಆರೋಗ್ಯ ಸರಿ ಇರುವುದಿಲ್ಲ ಎಂದರೆ ಸರಿ. ಎದುರುದಾರರಿಗೆ ಮಾಸಿಕವಾಗಿ ಕನಿಷ್ಠ 8 ಸಾವಿರ ರೂ.ಗಳು ಖರ್ಚು ಆಗುತ್ತದೆ ಎಂದರೆ ಸರಿ. ಎದುರುದಾರರಿಗೆ ಮನೆ ಇಲ್ಲದ ಕಾರಣ ಬಾಡಿಗೆ ಮನೆಯಲ್ಲಿ ವಾಸವಿದ್ದು, ಮಾಸಿಕವಾಗಿ ರೂ.6000/- ಗಳನ್ನು ಬಾಡಿಗೆಯಾಗಿ ನೀಡುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಅವರು ಬಾಡಿಗೆ ಮನೆಯಲ್ಲಿ ವಾಸವಿರುತ್ತಾರೆ ಎಂದರೆ ಸರಿ. ಎದುರುದಾರರ ಯೋಗಕ್ಷೇಮವನ್ನು ವಿಚಾರಿಸಲು ಮತ್ತು ಪಾಲನೆ ಪೋಷಣೆ ಮಾಡಲು ಯಾರು ಇರುವುದಿಲ್ಲ ಎಂದರೆ ಸರಿ. ಎದುರುದಾರರು ಪ್ರತಿನಿತ್ಯ ಹೋಟೆಲ್ ನಲ್ಲಿ ಊಟ ಮಾಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಎದುರುದಾರರ ಯೋಗಕ್ಷೇಮವನ್ನು ವಿಚಾರಿಸಬೇಕಾಗುತ್ತದೆ ಎಂಬ ಕಾರಣದಿಂದ ನಾನೆ ಅವರನ್ನು ತ್ಯಜಿಸಿರುತ್ತೇನೆ ಎಂದರೆ ಸರಿಯಲ್ಲ. ಇದರಿಂದ ಎದುರುದಾರರು ಮಾನಸಿಕ ಹಿಂಸೆಯನ್ನು ಅನುಭವಿಸುತ್ತಿದ್ದಾರೆ ಎಂದರೆ ಸರಿಯಲ್ಲ.

ನನ್ನ ಮಗಳಿಗೆ ಮದುವೆ ಆಗಿರುತ್ತದೆ. ಅವರು ಗಂಡನ ಮನೆಯಲ್ಲಿ ವಾಸವಿರುತ್ತಾರೆ ಎಂದರೆ ಸರಿ. ನನ್ನ ಮಗನಿಗೆ 24 ವರ್ಷ ವಯಸ್ಸಾಗಿದ್ದು, ಆದರೆ ಅವನು ಯಾವುದೇ ಕೆಲಸಕ್ಕೆ ಹೋಗುತ್ತಿಲ್ಲ. ನನ್ನ ಮಗನು ಕೆಲಸಕ್ಕೆ ಹೋಗುತ್ತಿದ್ದು, ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನನ್ನ ಮಗಳ ಮದುವೆಗೆ ಎದುರುದಾರರು ಹಣವನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಅಣ್ಣ ನಂಜುಂಡಸ್ವಾಮಿ ರವರ ಬಳಿ ಮಗಳ ಮದುವೆಯ ಖರ್ಚಿಗಾಗಿ ಹಣವನ್ನು ಎದುರುದಾರರು ನೀಡಿರುತ್ತಾರೆ ಎಂದರೆ ಸರಿಯಲ್ಲ. ನಿ.ಪಿ.5 ರಲ್ಲಿ ತಂದೆ ತಾಯಿಯ ವಾರ್ಷಿಕ ವರಮಾನ ರೂ.65,000/- ಎಂದು ನಮೂದು ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಿ.ಪಿ.11 ರಿಂದ ನಿ.ಪಿ.14 ರ ದಾಖಲೆಗಳಲ್ಲಿ ಖರೀದಿದಾರರ ಹೆಸರು ನಮೂದು ಇರುವುದಿಲ್ಲ ಎಂದರೆ ಸರಿ. ನಿ.ಪಿ.8 ರಿಂದ ನಿ.ಪಿ.10 ರ ದಾಖಲೆಗಳಲ್ಲಿ ನಮೂದು ಮಾಡಿರುವ ಹಣವನ್ನು ಎದುರುದಾರರು ಭರಿಸಿರುತ್ತಾರೆ ಎಂದರೆ ಸರಿಯಲ್ಲ. ನಿ.ಪಿ.19 ರಲ್ಲಿ ಶಿವಸ್ವಾಮಿ, ಗುರುರಾಜ್ ಮತ್ತು ರಾಜೇಶ್ವರಿ ಎಂದು ನಮೂದು ಇರುತ್ತದೆ ಎಂದರೆ ಸರಿ. ನಿ.ಪಿ.18 ರಲ್ಲಿ ಚಿನ್ನದ ಅಂಗಡಿಯವರ ಸೀಲು ಇರುವುದಿಲ್ಲ ಎಂದರೆ ಸರಿ. ನಿ.ಪಿ.20 ರಲ್ಲಿ ಖರೀದಿದಾರರ ಹೆಸರು ನಮೂದು ಇರುವುದಿಲ್ಲ ಎಂದರೆ ಸರಿ. ನಿ.ಪಿ.17 ರಲ್ಲಿ ಬರೆದಿರುವ ವಿಚಾರಗಳು ಕಾಣಿಸುತ್ತಿಲ್ಲ ಎಂದರೆ ಸರಿ. ನನ್ನ ಮಗಳ ಮದುವೆಗೆ ಎದುರುದಾರರು ಹಣವನ್ನು ನೀಡಿದ್ದು, ಅದನ್ನು ಮರೆಮಾಚಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಎದುರುದಾರರು ನಿವೃತ್ತಿ ಹೊಂದಿರುತ್ತಾರೆ. ಎದುರುದಾರರಿಗೆ ಬರುವ ಪಿಂಚಣಿಯಿಂದ ಅವರ ಜೀವನ ನಡೆಸಲು ಆಗುತ್ತಿಲ್ಲ ಎಂದರೆ ಸರಿಯಲ್ಲ.

ಎಂ.ಸಿ.ಸಂಖ್ಯೆ 71/2020 ರಂತೆ ಮಂಡ್ಯ ನ್ಯಾಯಾಲಯದಲ್ಲಿ ನಮ್ಮಿಬ್ಬರ ನಡುವೆ ವಿವಾಹ ವಿಚ್ಛೇದನ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಚಾರ ನನಗೆ ಗೊತ್ತಿದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನನಗೆ ಇಬ್ಬರು ಪ್ರಾಪ್ತ ಮಕ್ಕಳಿದ್ದು, ಅವರುಗಳು ನನ್ನನ್ನು ನೋಡಿಕೊಳ್ಳುತ್ತಿದ್ದಾರೆ ಎಂದರೆ ಸರಿಯಲ್ಲ. ಎದುರುದಾರರಿಗೆ ಬರುವ ಪಿಂಚಣಿಯಿಂದ ಅವರ ಜೀವನ ನಿರ್ವಹಿಸಲು ಸಾಕಾಗುತ್ತಿದ್ದು, ನನಗೆ ಯಾವುದೇ ಜೀವನಾಂಶವನ್ನು ನೀಡಲು ಅವರ ಬಳಿ ಇರುವುದಿಲ್ಲ ಎಂದರೆ ಸರಿಯಲ್ಲ. ಎದುರುದಾರರಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ಪ್ರಕರಣವನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

**(ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಒ.**

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**

**ಮತ್ತು ಪ್ರ.ದ.ನ್ಯಾದಂ. ತಿ.ನರಸೀಪುರ.**